POLICE.

The 5th August 1873.

Notice of a case of dacoity committed on the night of 25th July 1873, in the house of named Honnamma at Kálasettipura in the Kánakánahalli Talook, involving a loss of proper Rs. 616--4—0 as per subjoined list.

ಯಾದಾಸ್ತು ಕಾನಬಾನಹಳ್ಳಿ ತಾಲ್ಲೂಕು ಕಾಳಶೆಟ್ಟಿಪುರವಲ್ಲಿರುವ ಪಟೇಲ್ ಬಸವರಾಜ್ಯಯ್ಯನೆಂಬುವನ ಅಕ್ಕ ಹೊನ್ನಮ್ಮನವರ ಮನಿಗೆ 25—7—73ನೇ ರಾತ್ರಿ ಮಪಾಸ್ ಕಳ್ಳರು ನುಗ್ಗಿ ಹೊಡದು ಮಾಲ್ ದೋಚಿಕೊಂಡು ಹೋದ್ದಾ ಕರು ಬರೆಸಿದ ಮಾಲಿನ ಪಟ್ಟಿವಿವರಾ.

ಮೈಮೇಲಣ ಚಿನ್ನದ ನಗಗಳು.

ಚಿನ್ನದ ಸಂಣ ಗುಂಡಿನ ಸರ 3ಕ್ಕೆ ಗುಂಡು ಗೊತ್ತಿಲ್ಲ ಡಿಟೋ ಸರಕ್ಕೆ ಬೆಳ್ಳೀ ತಪ್ಪುಕಲ್ಲು ಬಟ್ಟುಮಾಡಿದ್ದ ಬಗೆ ತೂಕ 5 ವರಹಾಕ್ಕೆ ಅಪರಂಜಿ ಖರೀದಿ ಸುಮಾರು ಹೋಳುಬಟ್ಟು ಅವರೇ ಬೇಳೆ ಅಗಲವಾದ ಗುತ್ತು ವಿನಹಾ ಇನ್ನೇನೂ ಗುತ್ತು ಯಿಲ್ಲಾ. .. ..

ಚಿನ್ನದ ಯರಡೆಳೇ ಬಾಬತು ಸಂಣ ಗುಂಡುಗಳ ದೊಡ್ಡಸರಾ 1ಕ್ಕೆ ಸುಮಾರು 7 ವರಹಾ ತೂಕ ಅಪರಂಜಿ ಧಾರಗಳ ಕೊನೆಗೆ ಅವರೇ ಫೋತ್ರ ಹವಳಗಳು ಯರಡು ಪೋಣಿಸಿ ಕಟ್ಟಿ ಯಿತ್ತು .. .. ..

ಚಿನ್ನದ ವರಹಾಬಂಣ ನಾಲ್ಕೆಳೀಸರ ಸಂಣ ಗುಂಡಿನ ಬಾಬತು ಖರೀದಿ ಗೊತ್ತಿಲ್ಲ ಸುಮಾರು 8 ವರಹಾ ತೂಕ ಇರಬಹುದು ಇದಕ್ಕೆ ನೀಲದ ಕಲ್ಲು ಬಟ್ಟುತಾಳಿ ಅರ್ಧ ರೂಪಾಯಿ ಅಗಲ ಯಿತ್ತು. ಮತ್ತು ತಾಳಿ ಆಚೆ ಈಚೆ ಯರಡು ಹವಳ ಕೊನೆಗೆ 2 ಹವಳ ಪೋಣಿಸಿ ಮತ್ತು ಬಳ್ಳಿ ಕುಣಿಕೆ ಸಹ ಯಿಧೆ ಕೊನೆಗೆ ಧಾರಾ ಕಿತ್ತು ಹೋಗಿ ಕಟ್ಟಿಯಿದ್ದ ಗುತ್ತು ಯಿಧೆ .. ..

ಬೆಳ್ಳೀ ನಗಗಳು.

ಬೆಳ್ಳೀ ಕಡಗದ ಜೊತೆ 1ಕ್ಕೆ 5 ರೂಪಾಯಿ ತೂಕ ರೂಪಾಯಿನ ವರೆ ಬೆಳ್ಳೀ ಖರೀದಿ ಸುಮಾರು ಸಾದಾ ಪಟ್ಟಣ ಸೀಮೆ ಬಾಬತು .. ..

ಅಪರಂಜಿ ಜವರೀತುಂಬು ಕಾಲು ಚವರೀ ಕೂಡಲು ಅಂಟಿನ ಯಿತ್ತು ಸುಮಾರು 4 ವರಹಾ ತೂಕ ಖರೀದಿ ಸುಮಾರು ಶಾವಂತಿ ಮುಳ್ಳು ಜವರೀಕುಪ್ಪಿಗೇ ಮೇಲೆ ನಾಲ್ಕು ಸಾಲು ಹೊಡದು ಇತ್ತು ಸಾದಾ ಕೆಲಸ ..

ಕಬ್ಬಿಣದ ಭರಣಿ ಮತ್ತು ಹಿತ್ತಾಳೆ ಭರಣಿಯಲಿ ಸಹಾ ಯಿಟ್ಟು ಯಿದ್ದ ಬಾಬತು.

ರಾಗೀಕಾಳು ಗಾತ್ರದ ಮುತ್ತು ಕುಚ್ಚುಗಳಾಗಿ ಸುತ್ತಿಯಿದ್ದ ಉತ್ತರಾಜಿ ಕಾಯಿ ಬುಗಡಿ ಜೊತೆ 1ಕ್ಕೆ ..

ಸುಳ್ಳೀ ಮುತ್ತು ಸುತ್ತಿಯಿದ್ದ ಬಾಬತು ಕೆಂಪು ತಪ್ಪುಕಲ್ಲು ಪಾಕಿ ಯಿದ್ದಬಗೆ ಜೆನ್ನದ ಹೊನ್ನುಹುವು ಜೊತೆ 1ಕ್ಕೆ .. ..

ಚಿನ್ನದ ವರಹಾಬಂಣದ ಬಾಬತು ಯಲೆ ಬಾಜವಲಿ ಜೊತೆ 1ಕ್ಕೆ ವಂದು ವರಹ ತೂಕಕ್ಕೆ. ..

ದೊಡ್ಡ ತಾಳೀಸರದ ಗುಂಡಿಗೆ ಹಾಕತಕ್ಕ ಚಿನ್ನದ ಕಲ್ಲಿಗಳು 4 ಜೊತೆ, ಕೊಕ್ಕು ತಾಯಿತಿ ಜೊತೆ 1, ದೊಡ್ಡ ಬಿತ್ತಿಗುಂಡು 10 ಸಹಾ ತೂಕ ಬಂಣ ಗೊತ್ತಿಲ್ಲಾ. .. .. ..

ಕೈಕಟ್ಟಿನ ಹವಳ ಸಂಣ ಸೊಂಡೆಕಾಯಿ ಫೋತ್ರಕ್ಕೆ ಸ್ವಲ್ಪ ಕೆಜ್ಜೆ ಕಡ್ಡಿ ಬಿಡಿಯಾಗಿ ಇದ್ದದ್ದು 46 ಸುಮಾರು ಮತ್ತು ಯಿದರಲ್ಲಿ ಯಿದದ್ದು .. ..

ಬೆಳ್ಳಿ ಅಷ್ಟಬಳೆದ ತಿರುಪು ವಂದು ಯಿತ್ತು ಅವರ ಖರೀದಿ .. ..

ನಗದು ರಾಜಾ ರೂಪಾಯಿ 9, ಕುಂಪಣಿ ರೂಪಾಯಿ 350 ಜುಮ್ಲಾ 359 ರೂಪಾಯಿ ತಿವಾಯಿ ಬೆಳ್ಳಿಕಾಲು ಅಷ್ಟಪಿಲ್ಲಿ 4 ಜೊತೆಗೆ ಬಸವರಾಜ್ಯೆಯನದು 2 ಜೊತೆ ಸಹಾ ಸುಮಾರು ಖರೀದಿ 4 ರೂಪಾಯಿ ಜುಮ್ಲಾ ..

ಬೆಳ್ಳಿ ಕಂಕಣಿ ವಂಟಿ 1ಕ್ಕೆ ಖರೀದಿ .. ..

ಬಸವರಾಜ್ಯೆಯನ ಮಗ ಕಾಳ್ಯೆಯನ ಮೈ ಮೇಲೆ.

ಬೆಳ್ಳಿ ಕೊಲೆ ಸರಪಣಿ ಅದರ ತಾಯಿತಿ 1 ಸಹಾ ತೂಕ 9 ರೂಪಾಯಿ .. .. ..

ಖಾವಿ ದುಪಟಿಕ್ಕೆ ಜಳೇದು. .. ..

ೂಕಗಳು 2ಕ್ಕೆ ಪಂದು ಕೇಸ್ತ ಬಾಬತು ಇದಕ್ಕೆ ಹಿತ್ತಾಳಿ ಕಟ್ಟು ಕೊನೆಗೆ ಯರಡು ನಡುವೆ ವಂದು		
. ದೊಡ್ಡ ಗುಂಡಿನ ಲಾಳಾ ಗಜಾ ಮುರುದು ಪೋಗಿ ತುಂಡಾಗಿರುತ್ತೆ. ಕರ್ನಾಟಕ ಬಂದೂಕ 1ಕ್ಕೆ		
ಟ್ಟು 4 ಕಬ್ಬಿಣದ ಕಟ್ಟು 1 ಸತ ಈ ಮೇರಗೆ ಇರುವ ಕೇಪು ಬಂದೂಕ 1ಕ್ಕೆ ಕರೀದಿ. ..	10	0
ರ್ಗಟ ಬಂದೂಕ 1ಕೆ ಕರೀದಿ	8	0
ನ ಆಳು ನಡುವೇಲಿ ಯಿದ್ದ ವಡ್ಡರ ತಿಮ್ಮನ ಮೈಮೇಲೆ ಯಿದ್ದದ್ದು ಕಾಡಿ ಸುಪಟ 1ಕ್ಕೆ ಮೂರುವರೆ		
.. ..	2	0
ಜುಮ್ಲಾ	616	4

E. HEWETSON,
For Supt. of Police.

KOLAR DISTRICT.

ce offering a reward of fifty rupees for the apprehension of one Muniga, who murdered his wife th December last and absconded.

ಕೋಲಾರ ಡಿ॥ ಡಿ॥ ಕಮ್ಮಿಷನರವರ ಕೋರ್ಟಿನಿಂದಾ.

ರಿಂದ ಸಮಸ್ತ ಜನಗಳಿಗೂ ತಿಳಿಸುವದೇನಂದರೆ—ಕೋಲಾರ ತಾಲ್ಲೂಕು ಸೋಮೊಂಬುಧಿ ಅಗ್ರಹಾರದ ಗೊಲ್ಲಂಗುಂಡ ು ಕಿತ್ತಂಡೂರು ಗ್ರಾಮದ ಮುನಿಕ ವಕ್ಕ ಲಿಗರ ಚವಡೀ ಯಂಬವಳನ್ನ ಸ॥ ಗುಜಸ್ತಾ ಡಿಸಂಬರ್ 12ನೇ ತಾರೀಖಿ ಮಾಡಿ ಪರಾರೀ ಆಗಿರುವ ಯಿವಳ ಗಂಡನಾದ ಯಿದರ ಕೆಳಗೆ ನಮೂದಾಗುವ ಚಹರೇ ಪುಳ್ಳ ಮುನಿಗನೆಂಬವನ್ನ ಡಿಕೊಟ್ಟವರಿಗೆ ಸರಕಾತದಿಂದ 50 ರೂಪಾಯಿ ಇನಾಂ ಬೊರಕೀತು.

ಚಹರೆ.

ದು ಮುನಿಗಾ, ತಂದೆ ಜೆಸರು ಗೊತ್ತಿಲ್ಲ, ಸ್ಥಳ ಕೋಲಾರ ತಾಲ್ಲೂಕು ಕಿತ್ತಂಡೂರು, ವರ್ನ ಕೆಂಪು, ವಯಸ್ಸು 35 ವರುಷ, ಗುರ್ತು ವಗೈರೇ ಸಾಧಾರಣವಾಗಿ ಮೀಕಿ ಪಟ್ಟು, ಯಿದ್ದಾನೆ, ತಲೇಲಿ ಜುಟ್ಟುಇದೆ, ಮಟ್ಟತರವಾದ ಆಳು, ಿ ಚಿನ್ನದ ಮರಾಟ ಮುರು ಹಾಕಿದ್ದಾನೆ, ಅದಕ್ಕೆ ಮುತ್ತು ವಗೈರೆ ಯೆಲ್ಲಾ, 2 ಕಿವಿಗೂ ಚಿನ್ನದ ಸಂಣ ನುರುಪುಗಳು ಿ, ಕನ್ನಡ ಮತ್ತು ತೆಲುಗು ಮಾತು ಸಹಾ ಆಡುತ್ತಾನೆ, ಬಲದ ಕೈತೋಳಿಗೆ ವಂದು ಬೆಳ್ಳೀ ಬಳೆಯೂ, ಮುಂಗೈಗೆ ಯೂ ಯಡದ ಕಾಲಿನ ನಡುವಿನ ಜೆರಳಿಗೆ ಮಿಂಚುಗಳು ಸಹಾ ಇಟ್ಟುದ್ದಾನೆ.

ೀಖು 23ನೇ ಜುಲ್ಯೆ ಸ॥ 1873ನೇ ಯಿಸವಿ ಮೊಕ್ತಾಂ ಕೋಲಾರ.

ನಾರಣಪ್ಪ,
ಫಾರ್ ಡಿ॥ ಕ॥

TOOMKOOR DISTRICT.

ce regarding an application of Virabhadrappa and Karibasappa for a certificate under Act 1860.

ತುಮಕೂರು ಡಿಸ್ಟ್ರಿಕ್ಟ್ ಡಿ॥ ಕಮ್ಮಿಷನರ್ ಸಾಹೇಬರವರ ಕೋರ್ಟಿನಿಂದ.

ಸ॥ 1873ನೇ ಇಸವಿ ಫೂಟ್ ನಂಬರ್ 9.

ರಿಂದ ಸಮಸ್ತ ಜನಗಳಿಗೂ ತಿಳಿಯ ಪಡಿಸುವದೇನಂದರೆ, ಕನಬಾ ತುಮಕೂರಲ್ಲಿರುವ ಶಿಡ್ಲಘಟ್ಟದ ವೀರಭದ್ರಪ್ಪ, ಕರಿಬಸಪ್ಪ ಸಹಾ ಫಾತೀ ಆದ ಚನ್ನವೀರಪ್ಪನಿಗೆ ಬರತಕ್ಕ ಪೈವಿ ಬಾಕಿ ಮೊಬಲಗು 900 ರೂಪಾಯಿ ಪೊರ್ತಿಡಿ ಸ॥ 1860ನೇ ಯಿಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಖಾಯಿಷ್ ಮಾಡಿ ಕೊಟ್ಟಿರುವ ಅರ್ಜಿಯನ್ನ ಮಾರುವ ೀಖು 11ರಲ್ಲು ಹಿಯರಿಂಗ್ ಮಾಡುತ್ತೇವಾದ್ದರಿಂದ ಇದರ ಮೇಲೆ ಬಾಧ್ಯತೆ ಅಥವಾ ತಕರಾರು ಪುಳ್ಳವರು ಸದರೀ ೦ ಘಂಟೆಗೆ ಸರಿಯಾಗಿ ಈ ಕೋರ್ಟು ರೂಬರೂ ಹಾಜರಾಗತಕ್ಕದ್ದು.

ೀ ಮಾಹೇ ಜುಲ್ಯೆ ಸ॥ 1873ನೇ ಇಸವಿ ಮೊಕ್ತಾಂ ಶೈಚಾಪುರ, ತಾಲ್ಲೂಕು ಕೊ[illegible]ಗೆರೆ.

MOTTET,
Commr.

MYSORE DISTRICT.

ಮೈಸೂರು ಡಿಸ್ಟ್ರಿಕ್ಟ್ ಮೇಜಸ್ಟ್ರೇಟ್ ಕೋರ್ಟ್‌ನಿಂದ.

ಇದರಿಂದ ತಿಳಿಯಪಡಿಸುವದೇನಂದರೆ, ಜೂನ್ ತಾಹೆ 12ನೇ ನಮ್ಬರ್ 494ನೇ ನಂಬರ್ ವುಳ್ಳ ಜುಡಿಷಿಯಲ್ ಕವಿ ರ ಡಾಕಿಟ್‌ನಿಂದ ಕೊಡಲ್ಪಟ್ಟ ಅಧಿಕಾರವನ್ನನುಸರಿಸಿ, ಸ್ನ 1873ನೇ ಮೇ ತಿಂಗಳು 5ನೇ ತಾರೀಖಿನಲ್ಲಿ ಖೂನಿ ನಡಸಿ ಸೀರ್ ಆಪಾದಿಸಲ್ಪಟ್ಟ ಮೈಸೂರ್ ತಾಲ್ಲೂಕು ನಾಜನಹಳ್ಳಿಗೆ ಕೀರಿದ ವಡ್ಡರ ದಾನಾಜೋಯಿ ಯೆಂಬುವನನ್ನು, ದಸ್ತಗಿರಿಕ್ಕೆ ಅನುಕೂಲಿಸುವಷ್ಟು ಖಾತಮಿ ಕೊಡುವ ಮನುಷ್ಯ ಯಾ ಮನುಷ್ಯರಿಗೆ ಇನ್ನೂರು ರೂಪಾಯಿಗಳ ಇನಾಂ ಕೊಡ ಪರಾರಿಯಾಗಿರುವವನ ಜಹರೆ ಪಟ್ಟಿ ಇದಕ್ಕೆ ಕೀರಿಸಿರುತ್ತೆ.

ಮೈಸೂರು ತಾಲ್ಲೂಕು ನಾಜನಹಳ್ಳಿ ವಾಸಸ್ಥನಾದ ಗಂಗಡಿಕಾರ ತಿಮ್ಮೇಗವುಡ 1, ಯಿವನ ಮಗಳು ತಿಮ್ಮಿ 2 ಮೇ ತಾರೀಖು 5ನೇ ಹಗಲು ಸುಮಾರು 8 ಘಂಟೆ ವೇಳೆ ನಾಜನಹಳ್ಳಿ ದಾಸಿಯು ಖೂನ ಮಾಡಿ ಪರಾರಿಯಾದವನ ಜ

ಹೆಸರು ದಾಸೇ, ವುರಫ್ ಕೊಡತಿ, ತಂದೇ ಹೆಸರು ತಿಮ್ಮಾಜೋಯಿ, ಜಾತಿ, ಕಲ್ಲು ವಡ್ಡರು, ಸ್ಥಳ ನಾಜನಹಳ್ಳಿ, ಸುಮಾರು 30 ವರುಷ ಜಹರೆ ಯಣಗೆಂಪುವರ್ನ, ಮಾಫಕ್ ಪುಡ್ಡನೇಲಳು, ಕಟ್ಟುಮಸ್ತಾಗಿದಾನೆ, ಕರೀಕಂಬಳಿ ಹೆ. ಕರೀಚಡ್ಡಿ ಹಾಕಿಕೊಂಡು ಯಿದ್ದಾನೆ, ಎಡಗೈಲಿ ಚಿನ್ನದ ಜಟ್ಟು ಕೊಂಡಲು ಯಿಟ್ಟು ಇದ್ದಾನೆ, ಯೆದೇ ಮೇಲೆ ಕರೀರೋಮ ಸಂಣವಿಾನೆ, ಯಿಸ್ಟು ಜಹರೆ ಯಿದೆ, ಕಾಲಿಗೆ ಕಪ್ಪು ಹಾಕಿ ಲಿದ್ದಾನೆ.

ಇದನ್ನು ಸದರೀಯವನ ಅಂಣನಾದ ರಾಮಾಜೋಯಿ ಬರಸಿದ್ದಾನೆ, ಈ ಬಳಿ ರಾಮಾಜೋಯಿ ಗುರುತು ಯಿದೆ.

W. H
Offg. Dy.

ಮೈಸೂರು ಟವರ್ ಮೇಜಸ್ಟ್ರೇಟ್ ಕೋರ್ಟ್‌ನಿಂದಾ.

~~ತಾರೀಖು 30ನೇ ಜುಲೈ 1873 ಜೊಕ್ತಾ ಮೈಸೂರು.~~

ಇದರಿಂದ ತಿಳಿಸುವದೇನಂದರೆ, ಮೈಸೂರು ಟವರ್ ಮೇಜಸ್ಟ್ರೇಟ್ ಕೋರ್ಟು ಫೈಲ್ 1873ನೇ ಇಸವಿ 116ನ ಕ್ರಿಮಿನಲ್ ಮೊಕದ್ದಮೆಯಲ್ಲಿ ಫಿರ್ಯಾದಿ ಮೋಪನಗಿರಿ ಗೋಸಾಯಿ ಯೆಂಬವನು, ಈ ಮೊಕದ್ದಮೆಯಲ್ಲಿ ವಿಶ್ವಾಸ ಘಾತ ಸೀರ್ ಆಪಾದಿಸಲ್ಪಟ್ಟ ಮೈಸೂರು ನಿವಾಸಿಯಾದ ಸಾಹುಕಾರ ಗುಂಸಿಗಿರಿ ಗೋಸಾಯಿ ದಸ್ತಗಿರಿಗೆ ತಪ್ಪಿಸಿಕೊಂಡು ತಿರು ತಿಳಿಯಬರುವದ್ದರಿಂದ ಸದರೀ ಯವನು ಪತ್ತೆ ಆಗರಿಕ್ಕೂ ದಸ್ತಗಿರಿ ಆಗಲಿಕ್ಕೂ ಅನುಕೂಲಿಸುವ ಖಾತಮಿ ಕೊಡುವ ಮನುಷ್ಯನಿಗಾಗಲಿ ಐವತ್ತು ರೂಪಾಯಿಗಳ ಇನಾಂ ಕೊಡುತ್ತೇನೆಂತ ತಿಳಿಸಿರುತ್ತಾನೆ.

E. ARMISTRO
Offg. Town Magistrate of

SHIMOGA DISTRICT.

Notice regarding an application of Doddiramma and Nanjappa for a certificate under Act of 1860.

ಶಿವಮೊಗ್ಗ ಡಿ॥ ಡಿ॥ ಕಮಿಷ್ಟನರವರ ಕೋರ್ಟ್‌ನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತನ್ನ ದೊಡ್ಡಪ್ಪನಾದ ಅಂಗಡಿ ಮುರಿಗೆಪ್ಪನ ಆ ಸಮ್ಮಂಧ ಬರತಕ್ಕ ಸುಮಾರು 2000 ಸಾವಿರ ರೂಪಾಯಿ ವಸೂಲ್ಮಾಡಿ ಕೊಳ್ಳುವದಕ್ಕೆ ಸ್ನ 1860ನೇ ಇಸವಿ ಅಕ್ಟು ಪ್ರಕಾರ ತನ್ನ ಹೆಸರಿಗೂ, ತನ್ನ ದೊಡ್ಡಪ್ಪನ ಹೆಂಡತಿ ದೊಡ್ಡೀರಮ್ಮನ ಹೆಸರಿಗೂ ಸಹಾ ಸರಟಿಫಿಕೇಟ್ ಕೊಡಿ ಶಿವಮೊಗ್ಗಾ ತಾಲ್ಲೂಕು ಹಿರಿಯೂರಲ್ಲಿರುವ ದೊಡ್ಡೀರಮ್ಮ, ನಂಜಪ್ಪ ಸಹಾ ಕೊಟ್ಟ ಅಪ್ಲಿಕೇಷನ್ ಸಂಗತಿ ಬರುವ ತಾರೀಖು 29ನೇ ದಿನ ವಿಮರ್ಶೆ ಮಾಡುವದ್ದರಿಂದ ತಕರಾರು ಪುಳ್ಳವರು ಆ ತಾರೀಖು ಹಗಲು 10 ಘಂಟೆಗೆ ಈ ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದಿದೆ.

ತಾರೀಖು 22ನೇ ಜುಲೈ 1873ನೇ ಇಸವಿ ಮೊಕ್ತಾಂ ಶಿವಮೊಗ್ಗಾ.

40

KADOOR DISTRICT.

ice regarding an application of Mallanna for a certificate under Act XXVII of 1860.

ಕಡೂರು ಡಿಸ್ಟ್ರಿಕ್ಟ್ ಡಿ|| ಕಮಿಷ್ಟ್ರನೆರ್ ಕೋರ್ಟಿನಿಂದಾ.

ರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ವಾಸಸ್ತ ಅಂಚೆ ಅರಿಯ ಮಲ್ಲಂಣನು ಫಾತಿಯಾದ ತನ್ನ ತಂದೆ ಅರಿಯಂಣಗೆ ಬರತಕ್ಕ ದಸ್ತಾವೇಜು ಬಾಬತು 500 ರೂಪಾಯಿ ಸಾಲದ ವಸೂಲ್ಮಾಡಿಕೊಳ್ಳುವದಕ್ಕೆ ಸ್ಯ 1860ನೇ ಇಸವಿ 27ನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಆಗವೇಕೆಂತ ಈ ದಾಖಲ್ಮಾಡಿದಾ ಸ್ಯ ಮಜಕೂರು ವಿಸಲೇನಿಯಸ್ ನಂಬರ್ 5ನೇ ಅರ್ಜಿಯನ್ನ ಮೂಹೇ ಮಜಕೂರು ತಾರೀಖು ವಾರ ದಿವಸ ಚಿಕ್ಕಮುಗಳೂರು ಮೊಕ್ಕಾಂನಲ್ಲಿ ಹಿಯರಿಂಗ್ ನಿಜ್ಮೈಸಿ ಯಿರುವದ್ದರಿಂದ ಈ ವಿಷಯದಲ್ಲಿ ಯಾರಾದರು ಯಿದ್ದ ಪಕ್ಷದಲ್ಲಿ ಈ ಕೋರ್ಟಿಗೆ ರೂಬರೂ ಹಾಜರಾಗಿ ಕ್ರಮಪ್ರಕಾರ ವೆವಹರಿಸ ತಕ್ಕದಾಗಿ ಇಧ್ಲೆ ತಿಳಿಯುವದು.

ತಾರೀಖು 1ನೇ ಆಗಸ್ಟು 1873ನೇ ಇಸವಿ ಮೊಕ್ಕಾಂ ಚಿಕ್ಕಮುಗಳೂರು.

P. KRISHNA RAO,
Offg. Dy. Commr.

MYSORE GOVERNMENT PRESS BANGALORE—1873.